193 :(404): ಶ್ರೀ ಬಾಲರಾಜ್ ಎಸ್.(ಕೊಳ್ಳೆಗಾಲ)

ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ರಾಜ್ಯದಲ್ಲಿ ಅತಿ ಹೆಚ್ಚು ಕರೆಗಳನ್ನು ಕೊಳ್ಳೆಗಾಲವು ಹೊಂದಿರುವುದು ಮತ್ತು ಅತಿ ಹೆಚ್ಚು ಮೀನುಗಾರರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದರೆ ಮೀನುಗಾರಿಕೆ ಸಂಖ್ಯೆಗನುಗುಣವಾಗಿ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ನೀಡಲು ಆಗಿಂದಾಗ್ಗೆ ಮನವಿ ಸಲ್ಲಿಸಿದ್ದಾಗ್ಯೂ ನೀಡದಿರಲು ಕಾರಣಗಳೇನು ;

ಇ) ಈ ಸಾಲಿನಲ್ಲಿದ್ದರೂ ಮೀನುಗಾರರಿಗೆ ಅವಶ್ಯ ವಸತಿಯನ್ನು ನೀಡಲಾಗುವುದೇ?

ಶ್ರೀ ಬಿ.ನಾಗರಾಜ್ ಶೆಟ್ಟಿ

ಅ) ರಾಜ್ಯದ ಇತರೆ ತಾಲ್ಲೂಕುಗಳಲ್ಲಿ ಹೆಚ್ಚು ಕೆರೆಗಳು ಮತ್ತು ಮೀನುಗಾರರಿರುವಂತೆ, ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸಹ ಹೆಚ್ಚು ಕೆರೆಗಳು ಮತ್ತು ಹೆಚ್ಚು ಮೀನುಗಾರರಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅನುದಾನದ ಲಭ್ಯತೆಗನುಗುಣವಾಗಿ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳನ್ನು ಮಂಜೂರು ಮಾಡಲಾಗುತ್ತಿದೆ.

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.